**ಸಾಕ್ಷಿಯನ್ನು ದಿಃ 17.03.2026 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ.

ಅರ್ಜಿದಾರರಿಗೆ ಸಂಬಂಧಿಸಿದ ಕೇಸ್ ಶೀಟನ್ನು ಹಾಜರುಪಡಿಸಿದ್ದು ಅದನ್ನು ನಿಪಿ. 13 ಎಂದು,

ಒಟ್ಟು 3 ಎಕ್ಸ್ ರೇ ಫಿಲಂಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ. 14 ಎಂದು,

ಸೈಕೋಲಾಜಿಕಲ್ ಅಸ್ಸೆಸ್ಮೆಂಟ್ ವರದಿಯನ್ನು ಹಾಜರು ಪಡಿಸಿದ್ದು ನಿಪಿ. 15 ಎಂದು,

ಹೊರರೋಗಿ ದಾಖಲೆಯನ್ನು ಹಾಜರು ಪಡಿಸಿದ್ದು ನಿಪಿ. 16 ಎಂದು ಗುರುತಿಸಲಾಯಿತು.

**ಪಾಟೀ ಸವಾಲು – 3 ನೇ ಎದುರುದಾರರ ಪರ ವಕೀಲರಿಂದ**

1. ನಮಗೆ ವಿವೇಕಾನಂದ ಮೆಮೋರಿಯಲ್ ಆಸ್ಪತ್ರೆಯಿಂದ ಈ ಪ್ರಕರಣ ರೆಫರ್ ಆಗಿತ್ತು. ರೆಫರ್ ಲೆಟರ್ ನ್ನು ನಾನು ನೋಡಿಲ್ಲ. ಸದರಿ ಪತ್ರ ಕೇಸ್ ಶೀಟ್ ನಲ್ಲಿ ಇದೆ ಎಂದರೆ ಸರಿ. ಸದರಿ ಪತ್ರದಲ್ಲಿ 52 ವರ್ಷ ಅರ್ಜಿದಾರರು ಮಧ್ಯಪಾನ ಮಾಡಿ ಬಿದ್ದು ಗಾಯಗೊಂಡಿದ್ದು ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ರೆಫರ್ ಮಾಡಿರುವುದಾಗಿ ನಮೂದಿದೆ. ಸಾಕ್ಷಿ ಒಪ್ಪಿದ ರೆಫರಲ್ ಲೆಟರ್ ನ್ನು ನಿ.ಆರ್.1 ಎಂದು ಗುರುತಿಸಲಾಯಿತು. ಸದರಿ ಪತ್ರದ ಆದಾರದ ಮೇಲೆ ಚಿಕಿತ್ಸೆ ನೀಡಿದ್ದೇನೆ ಎಂದರೆ ನಾನು ಸಿ.ಎಂ.ಓ ಹಿಸ್ಟರಿ ಹಾಗೂ ಸಿ.ಟಿ ರಿಪೋರ್ಟ್ ನ ಆದಾರದ ಮೇಲೆ ಮಾಡಿದ್ದೇನೆ ಎನ್ನುತ್ತಾರೆ. ನಿ.ಆರ್ 1 ರ ನಂತರದ ದಾಖಲೆ ಎಂದರೆ ಸರಿ. ನಿ.ಆರ್ 1 ರಲ್ಲಿನ ನಮೂದನೆ ಪ್ರಕಾರ ನಾನು ಚಿಕಿತ್ಸೆ ಮುಂದುವರೆಸಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಆಸ್ಪತ್ರೆಗೆ ಬಂದಾಗ ಅರ್ಜಿದಾರರಿಗೆ ಪ್ರಜ್ಞೆ ಇರಲಿಲ್ಲ. ದಿ.15.08.2022 ಕ್ಕೆ ನಮ್ಮ ಆಸ್ಪತ್ರೆಗೆ ದಾಖಲಾಗಿದ್ದಾರೆ. ನಿ ಆರ್ 1 ನ್ನು ದಿ15.08.2022 ಕ್ಕೆ ನೀಡಿದ್ದಾರೆ. ನಾವು ನಮ್ಮ

ಆಸ್ಪತ್ರೆಯ ವೈಯಕ್ತಿಕ ಲಾಭಕ್ಕಾಗಿ ಎಮ್.ಎಲ್.ಸಿ ಎಂದು ರಿಜಿಸ್ಟರ್ ಮಾಡಿದ್ದೇವೆ ಎಂದರೆ ಸರಿಯಲ್ಲ.

2. ವಿವೇಕಾನಂದ ಮೆಮೋರಿಯಲ್ ಆಸ್ಪತ್ರೆಯ ದಾಖಲೆಗಳಲ್ಲಿ ಗಾಯಾಳುವಿನ ಬಗ್ಗೆ ಪ್ರಕರಣವನ್ನು ಆರ್.ಟಿ.ಎ ಎಂದು ನಮೂದು ಮಾಡಿಲ್ಲ ಎಂದರೆ ಸರಿ. ಆದ ಕಾರಣ ನಾನು Non RTA patient ಗೆ ಚಿಕಿತ್ಸೆ ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಅರ್ಜಿದಾರರನ್ನು 15 ನೇ ತಾರೀಕಿನಂದೆ ಪರೀಕ್ಷಿಸಿದ್ದೇನೆ. ಗಾಯಾಳವನ್ನು ನೋಡುವವರೆಗೂ ನನಗೆ ಅವರ ಹಿನ್ನೆಲೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅಪಘಾತದಲ್ಲಿ ತಲೆಗೆ ಗಾಯಗೊಂಡು ಬಂದಿದ್ದಾರೆ ಎಂದು ನನಗೆ ಮಾಹಿತಿ ಇತ್ತು ಎನ್ನುತ್ತಾರೆ. ಮೆಡಿಕಲ್ ಗೈಡ್ ಲೈನ್ಸ್ ಪ್ರಕಾರ ಮೊದಲ ಆಸ್ಪತ್ರೆಯಲ್ಲಿ ಎಮ್.ಎಲ್.ಸಿ ಆಗಿದ್ದರೆ ಅದನ್ನೇ ಮುಂದುವರೆಸಬೇಕು ಎಂದರೆ ಸರಿ. ಮೊದಲ ಆಸ್ಪತ್ರೆಯಲ್ಲಿ ಎಮ್.ಎಲ್.ಸಿ ಆಗಿರಲಿಲ್ಲ ಎಂದರೆ ಸರಿ. ಆದ ಕಾರಣ ನಾವುಸಹ ನಾನ್ ಎಮ್.ಎಲ್.ಸಿ ಎಂದು ಮುದುವರೆಯಬೇಕಿತ್ತು ಎಂದರೆ ಮೆಡಿಕಲ್ ಗೈಡ್ ಲೈನ್ಸ್ ಪ್ರಕಾರ ಸರಿ ಎನ್ನುತ್ತಾರೆ. ನಮ್ಮ ಆಸ್ಪತ್ರೆಗೆ ಗಾಯಾಳವನ್ನು ಗಾಯಾಳುವಿನ ಮಗ ರಘು ಕರೆದುಕೊಂಡು ಬಂದಿರುತ್ತಾರೆ. ನಾನ್ ಎಮ್.ಎಲ್.ಸಿ ಪ್ರಕಾರಣ ಆದ ಕಾರಣ ಸೈಕೊಲೋಜಿಕಲ್ ಅಸ್ಸೆಂಟ್ ವರದಿಯನ್ನು ಅರ್ಜಿದಾರರಿಗೆ ಸಹಾಯ ಮಾಡಲು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು – 1 ಮತ್ತು 2 ನೇ ಎದುರುದಾರರ ಪರ ವಕೀಲರಿಂದ</u>**

1 ಮತ್ತು 2 ನೇ ಎದುರುದಾರರು ಹಾಗೂ ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಗಿ ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.
(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.